# ಅಭಿಷೇಕ್ ಶರ್ಮ

## ಚಿತ್ತಾಕರ್ಷಕ ದಾಳಿಕೋರ

ಪಂಜಾಬ್ ಹುಡುಗರಿಗೆ ಅದೆಂಥದೋ ಉತ್ಕಟತೆ. ಭಾರತ 2011ರಲ್ಲಿ ವಿಶ್ವಕಪ್ ಗೆದ್ದಾಗ, ಯುವರಾಜ್ ಸಿಂಗ್ ಸರಣಿ ಶ್ರೇಷ್ಠರಾಗಿದ್ದರು. ಅವರಿಗಿದ್ದ ದಾಳಿಕೋರತನವನ್ನು ಶುಭಮನ್ ಗಿಲ್ ಹಾಗೂ ಅಭಿಷೇಕ್ ಶರ್ಮ ಎಂಬಿಬ್ಬರಿಗೂ ಗೊಬ್ಬರವಾಗಿ ಕೊಟ್ಟರು. ಈ ಸಲದ ಐಪಿಎಲ್‌ನಲ್ಲಿ ಅಭಿಷೇಕ್ ಶರ್ಮ ಆ ಗೊಬ್ಬರವನ್ನು ಎಷ್ಟರಮಟ್ಟಿಗೆ ಹೀರಿಕೊಂಡಿದ್ದಾರೆನ್ನುವುದು ಕಾಣುತ್ತಿದೆ.

■ ವಿಶಾಖ ಎನ್.



‘ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್’ (ಐಪಿಎಲ್) ಯಾರು ಯಾರನ್ನೆಲ್ಲ ಒಂದು ಬಿಂದುವಿನ ಮೇಲೆ ತಂದು ನಿಲ್ಲಿಸುತ್ತಿದೆ, ನೋಡಿ.

‘ಸನ್‌ರೈಸರ್ಸ್ ಹೈದರಾಬಾದ್’ (ಎಸ್‌ಆರ್‌ಎಚ್) ತಂಡದ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮ ಅವರ ಒಂದೊಂದೂ ಕದಲಿಕೆಯನ್ನು ಯುವರಾಜ್ ಸಿಂಗ್ ಗಮನಿಸುತ್ತಿದ್ದಾರೆ. ಪ್ರತಿ ಸಲ ಈ ಹುಡುಗ ಔಟಾದ ನಂತರ ಅವರಿಂದ ನೇರಾನೇರ ಆಟದ ವಿಮರ್ಶೆ. ಅತ್ತ ನೆಟ್ಸ್ ಕಡೆ ನೋಡಿದರೆ, ವೆಸ್ಟ್‌ಇಂಡೀಸ್‌ನ ಶ್ರೇಷ್ಠ ಬ್ರಯಾನ್ ಲಾರಾ ಟಿಪ್ಸ್ ಕೊಡಲು ನಿಂತಿರುತ್ತಾರೆ. ಅಂತಹ ತರಬೇತುದಾರ ಸಿಗುವುದು ಅಭಿಷೇಕ್ ತರಹದ ಹುಡುಗರಿಗೆ ವರದಾನವೇ ಹೌದು.

ಐಪಿಎಲ್‌ನ ಪವರ್‌ಪ್ಲೇನಲ್ಲಿ ಎಸ್‌ಆರ್‌ಎಚ್ ತಂಡ ಈ ಸಲ ಕಾಡುತ್ತಿರುವ ಪರಿಯನ್ನು ನೋಡಿದರೆ, ಎಲ್ಲಾ ಎದುರಾಳಿ ತಂಡಗಳೂ ತಮ್ಮ ಬ್ಯಾಟಿಂಗ್ ತಂತ್ರವನ್ನು ಇನ್ನೂ ಎರಡು ಹಂತ ಮೇಲಕ್ಕೆತ್ತುವ ಆಲೋಚನೆ ಮಾಡಬೇಕು, ಹಾಗಿದೆ. ಎಸ್‌ಆರ್‌ಎಚ್ ಈ ವಿಷಯದಲ್ಲಿ ರೂಪಿಸಿರುವ ಗುಣಮಟ್ಟದಲ್ಲಿ ಅಭಿಷೇಕ್ ಶರ್ಮ ಜೊತೆಗೆ ಆಸ್ಟ್ರೇಲಿಯಾದ ಬ್ಯಾಟರ್ ಟ್ರಾವಿಸ್ ಹೆಡ್ ಪಾತ್ರವೂ ದೊಡ್ಡದಿದೆ.

ಶುಭಮನ್ ಗಿಲ್ ಹಾಗೂ ಅಭಿಷೇಕ್ ಶರ್ಮ ಇಬ್ಬರೂ ಕ್ರಿಕೆಟ್‌ನಲ್ಲಿ ವಾರಗೆಯವರು. 2017ರಲ್ಲಿ ಇಬ್ಬರೂ ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟದ್ದು. ಇಬ್ಬರ ತಂತ್ರಗಳಿಗೂ ಪಂಜಾಬ್‌ನವರೇ ಆದ ಯುವರಾಜ್ ಸಿಂಗ್ ಗೊಬ್ಬರ ಹಾಕಿದರು. ಗಿಲ್ ಈಗ ಭಾರತ ಕ್ರಿಕೆಟ್ ತಂಡದ ಏಕದಿನ ಹಾಗೂ ಟೆಸ್ಟ್ ಪಂದ್ಯಗಳಲ್ಲೂ ಪಳಗಿದ್ದಾರೆ. ಚುಟುಕು ಕ್ರಿಕೆಟ್‌ನ ವೇಗಕ್ಕೆ ಒಗ್ಗಿಕೊಳ್ಳುವುದರಲ್ಲೂ ಅವರು ಮಾದರಿ. ಮೇಲಾಗಿ, ‘ಗುಜರಾತ್ ಟೈಟನ್ಸ್’ ತಂಡದ ನಾಯಕ. ಒಬ್ಬ ಶಿಷ್ಯ ಈ ಮಟ್ಟಕ್ಕೆ ಬೆಳೆದ ಮೇಲೆ ಯುವರಾಜ್ ಸಿಂಗ್ ಈಗ ಇನ್ನೊಬ್ಬ ಶಿಷ್ಯ ಅಭಿಷೇಕ್ ಶರ್ಮ ಅವರನ್ನು ಹೊಸ ರೇಸ್‌ಗೆ ಇಳಿಸುತ್ತಿದ್ದಾರೆ.

‘ಫಡ್ ಜಾರಾ ಏಣು’ ಎಂದು ಪಂಜಾಬಿ ಭಾಷೆಯಲ್ಲಿ ಯುವರಾಜ್‌ಸಿಂಗ್ ಇತ್ತೀಚೆಗೆ ‘ಎಕ್ಸ್’ ಮಾಡಿದ್ದರು. ಪಂಜಾಬ್ ಕಿಂಗ್ಸ್ ತಂಡದ ವಿರುದ್ಧದ ಪಂದ್ಯದಲ್ಲಿ ಗಿಲ್ 59 ಎಸೆತಗಳಲ್ಲಿ 96 ರನ್ ಹೊಡೆದ ನಂತರ ಯುವರಾಜ್ ಈ ರೀತಿ ಸಂದೇಶ ಪೋಸ್ಟ್ ಮಾಡಿದ್ದು ಅಭಿಷೇಕ್ ಶರ್ಮ ಅವರಿಗೆ. ‘ಅವನನ್ನು ಹಿಡಿಯಪ್ಪ’ ಎನ್ನುವ ಅರ್ಥ ಕೊಡುವ ಪಂಜಾಬ್ ನುಡಿಗಟ್ಟು ಅದು. ಕನ್ನಡದಲ್ಲಿ ನಾವು, ‘ನೀನೂ ಅವನಂತೆ ಆಗು... ಅವನ ಬೆನ್ನಟ್ಟು’ ಎನ್ನುತ್ತೇವಲ್ಲ ಹಾಗೆ.

ಯುವರಾಜ್ ಸಿಂಗ್ ಆ ರೀತಿ ಟಾಂಗ್ ಕೊಟ್ಟಿದ್ದೇ, ಮರುದಿನವೇ ಅಭಿಷೇಕ್ ಶರ್ಮ 50 ಎಸೆತಗಳಲ್ಲಿ 75 ರನ್ ಕಲೆಹಾಕಿದರು. ಆ ಪಂದ್ಯದಲ್ಲಿ ‘ಚೆನ್ನೈ ಸೂಪರ್ ಕಿಂಗ್ಸ್’ ಎದುರು ಎಂಟು ವಿಕೆಟ್‌ಗಳಿಂದ ಎಸ್‌ಆರ್‌ಎಚ್ ಗೆಲುವು ಸಾಧಿಸಿತು. ಆ ಇನಿಂಗ್ಸ್ ಅನ್ನು ಯುವರಾಜ್ ಸಿಂಗ್ ಅವರಿಗೆ ಅರ್ಪಿಸಿ, ಶಿಷ್ಯ ಮಂದಹಾಸ ಬೀರಿದ್ದು ವಿಶೇಷ ಸಂದರ್ಭವೆನ್ನಿ.

ಗಿಲ್ ಹಾಗೂ ಅಭಿಷೇಕ್ ಇಬ್ಬರೂ 2018ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದವರು. ಆ ಟೂರ್ನಿಯಲ್ಲಿ